**ಸಾಕ್ಷಿಯನ್ನು ದಿಃ 05.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ. ವಿಎಎನ್ ವಕೀಲರಿಂದ**

ಅಸಲು ದಾವಾ ಸಂಖ್ಯೆ 301/2005 ಏಕಪಕ್ಷೀಯವಾಗಿ ನಿರ್ಧಾರವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಅದರಲ್ಲಿ ಪ್ರತಿವಾದಿಯು ತಕರಾರು ಹಾಕಿದ್ದಾರೆ ಎಂದು ನುಡಿಯುತ್ತಾರೆ. ತಕರಾರು ಹಾಕಿದ ಬಳಿಕ ಈ ಅರ್ಜಿಯ ಅರ್ಜಿದಾರರು ಅವರ ವಕೀಲರನ್ನು ಕಾಣಲು ಆಗಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಡೆಂಗ್ಯೂ ಜ್ವರ, ಕಣ್ಣಿನ ದೋಷ ಮತ್ತು ಅಸ್ತಮಾ ಖಾಯಿಲೆ ಇತ್ತು ಎಂದರೆ ಸರಿಯಲ್ಲ. ಸದರಿ ಅರ್ಜಿದಾರನಿಗೆ ಒಬ್ಬ ಮಗ ಮತ್ತು 3-4 ಜನ ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ. ಹೆಣ್ಣು ಮಕ್ಕಳೆಲ್ಲ ಮದುವೆಯಾಗಿ ಗಂಡನ ಮನೆಯಲ್ಲಿ ವಾಸ ಎಂದರೆ ಸರಿ. 1 ನೇ ಅರ್ಜಿದಾರ ಖಾಯಿಲೆಯಿಂದಾಗಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವುದರಲ್ಲಿ ಉಳಿದ ಅರ್ಜಿದಾರರು ನಿರತರಾದ ಕಾರಣ ಅಸಲು ದಾವೆಯಲ್ಲಿ ಬಂದು ಸಾಕ್ಷಿ ಹೇಳಲಿಲ್ಲ ಎಂದರೆ ಸರಿಯಲ್ಲ. 1 ನೇ ಅರ್ಜಿದಾರನಿಗೆ ಸಾಯುವ ಕಾಲದಲ್ಲಿ 7 ವಯಸ್ಸಾಗಿತ್ತು ಎಂದರೆ ಸಾಕ್ಷಿಯು 65 ರಿಂದ 68 ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. 1 ನೇ ಅರ್ಜಿದಾರ ಎಂದಿಗೂ ಕಟಕಟೆಯನ್ನು ಹತ್ತಿ ಸಾಕ್ಷಿ ಹೇಳಿಲ್ಲ ಮತ್ತು ಅದಕ್ಕೆ ಅವಕಾಶ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಡಿಕ್ರಿಯಾದ ಬಳಿಕವೇ ತೀರ್ಪಿನ ಬಗ್ಗೆ ಅರ್ಜಿದಾರರಿಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನ್ಯಾಯಾಲಯಕ್ಕೆ ಬರಬಾರದು ಎಂಬ ದುರುದ್ದೇಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪರಿಸ್ಥಿತಿಯ ಅನಾನುಕೂಲದಿಂದ ಅರ್ಜಿದಾರರು ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ